**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯ, ಕೊಪ್ಪ</u>**

**<u>ಸಿ. ಸಿ. ನಂ.210/2025</u>**

**<u>ಪಿರ್ಯಾಧಿದಾರರು:</u>** ರಾಜ್ಯದ ಪರವಾಗಿಃ ಕೊಪ್ಪ ಪೊಲೀಸರು

**-ವಿರುದ್ಧ-**

**<u>ಆರೋಪಿ/ತರುಃ</u>** ರೋಷನ್ ಪಿರೇರಾ ಬಿನ್ ಪವಸ್ತಿನ್ ಪಿರೇರಾ, 30 ವರ್ಷ, ಕೃಷಿ ಕೆಲಸ, ವಾಸ ದಾವಣ ಗ್ರಾಮ, ಕಟ್ಟಿನಮನೆ ಅಂಚೆ, ನರಸಿಂಹರಾಜಪುರ ತಾಲ್ಲೂಕು.

**<u>ದೋಷಾರೋಪಣೆ</u>**

ಶ್ರೀಮತಿ ನಂದಿನಿ ಎಂ.ಎನ್., ಬಿ.ಎ., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 6/3/2025 ರಂದು ರಾತ್ರಿ 8-00 ಗಂಟೆ ಸಮಯದಲ್ಲಿ ಕೊಪ್ಪ ಪೊಲೀಸ್ ಠಾಣಾ ಸರಹದ್ದಿನ ಕೊಪ್ಪ ಪಟ್ಟಣದ ಭಾರತ್ ರೈಸ್ ಮಿಲ್ ರಸ್ತೆಯಲ್ಲಿ ಶ್ರೀ ನಾಗರಾಜರಾವ್ ರವರ ವಾಸದ ಮನೆಯ ಮುಂಭಾಗದಲ್ಲಿ ಹಾದು ಹೋಗಿರುವ ಕೊಪ್ಪ-ಕಾಚಗಲ್ ಟಾರು ರಸ್ತೆಯಲ್ಲಿ ಆರೋಪಿಯಾದ ನೀವು ಕೆಎ-18-ಸಿ-2156 ರ ಜಿತೋ ಗೂಡ್ಸ್ ವಾಹನವನ್ನು ಅತೀವೇಗ ಹಾಗೂ ಅಜಾಗರೂಕತೆಯಿಂದ ಮನುಷ್ಯನ ಜೀವಕ್ಕೆ ಅಪಾಯವುಂಟಾಗುವಂತೆ ಸದರಿ ರಸ್ತೆಯಲ್ಲಿ ಚಾಲನೆ ಮಾಡಿಕೊಂಡು ಬಂದು ಕೊಪ್ಪ ಕಡೆಯಿಂದ ಬರುತ್ತಿದ್ದ ಕೆಎ-19-ಕ್ಯೂ-0108 ರ ಸುಜುಕಿ ಸಮುರೈ ಮೋಟಾರ್ ಸೈಕಲ್ ಗೆ ಡಿಕ್ಕಿ ಹೊಡೆಸಿ ಅಪಘಾತವನ್ನುಂಟು ಮಾಡಿದ್ದಿರೀ. ಆದ ಕಾರಣ ನೀವು **ಭಾರತೀಯ ನ್ಯಾಯ ಸಂಹಿತ ಕಲಂ 281** ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮುಂದುವರೆದು ಮೇಲ್ಕಂಡಂತೆ ಅಪಘಾವವನ್ನುಂಟು ಮಾಡಿದ ಪರಿಣಾಮ ಬೈಕ್ ಚಾಲಕ ಉಮೇಶ ಬಿನ್ ಆನಂದರವರ ತಲೆಗೆ ಜಿತೋ ಗೂಡ್ಸ್ ವಾಹನದ ಸೈಡಿನ ರಾಡ್ ಬಲವಾಗಿ ಬಡಿದು ತಲೆಗೆ ತೀವ್ರ ತರಹದ ಪೆಟ್ಟಾಗಿ ದಿನಾಂಕ 6/3/2025 ರಂದು ಅಪಘಾತದಿಂದಾದ ಗಾಯಗಳಿಂದಾಗಿ ಮೃತಪಟ್ಟಿರುತ್ತಾರೆ. ಆದ ಕಾರಣ ನೀವು **ಭಾರತೀಯ ನ್ಯಾಯ ಸಂಹಿತ ಕಲಂ**

**106(1)ರ** ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ-18-ಸಿ-2156 ರ ಜಿತೋ ಗೂಡ್ಸ್ ವಾಹನಕ್ಕೆ ಪರವಾನಿಗೆ ಚಾಲ್ತಿಯಲ್ಲಿ ಇಲ್ಲದೆ ಸದರಿ ವಾಹನವನ್ನು ಸಾರ್ವಜನಿಕ ಸ್ಥಳದಲ್ಲಿ ಚಾಲನೆ ಮಾಡಿ ಅಪಘಾತವನ್ನುಂಟು ಮಾಡಿದ್ದೀರಿ. ಆದ ಕಾರಣ ನೀವು ಮೋಟಾರು ವಾಹನ ಕಾಯ್ದೆ ಕಲಂ 196**ರ** ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಪ್ರ:1ಃ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?

ಉಃ ತಿಳಿಯಿತು.

ಪ್ರ:2ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉಃ ವಿಚಾರಣೆಯಾಗಬೇಕು.

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 26.11.2025

ಸಹಿ/- 26.11.2025.
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
*ಪ್ರದನ್ಯಾದಂಃ ಕೊಪ್ಪ.*